**<u>ದಿನಾಂಕ 18/01/2020 ರಂದು ಸಾಕ್ಷಿಯನ್ನು ಪುನಹ ಕರೆಸಿ ಪ್ರಮಾಣೀಕರಿಸಲಾಯಿತು.</u>**

**<u>ಮುಂದುವರೆದ</u>** <u>ಪಾಟೀಸವಾಲು:</u> ಶ್ರೀ ಎಂ.ಈ.ಎಸ್ **ವಕೀಲರಿಂದ**

ಸಂತೋಷ ಮತ್ತು ಸುರೇಂದ್ರ ನನ್ನ ಅಣ್ಣಂದಿರು. ಎಂ.ಸಿ. ಹಳ್ಳಿ ಗ್ರಾಮದಲ್ಲಿ ಮಾತೋಶ್ರೀ ಆಂಗ್ಲ ಮಾಧ್ಯಮ ಶಾಲೆ ಎಂದರೆ ಸರಿ. ಸರ್ಕಾರಿ ಉನ್ನತೀಕರಿಸಿದ ಮಾದರಿ ಹಿರಿಯ ಪ್ರಾಥಮಿಕ ಶಾಲೆಯೂ ಸಹ ಇದೆ ಎಂದರೆ ಸರಿ. ತರಿಕೇರೆ ನಮ್ಮ ಗ್ರಾಮದ ಪಕ್ಕ ಇದೆ ಎಂದರೆ ಸರಿ. ಅಲ್ಲಿ ರಾಜ್ ನರ್ಸಿಂಗ್ ಹೋಂ ಎಂಬ ಹೆಸರಿನ ಆಸ್ಪತ್ರೆ ಇದೆ ಎಂದರೆ ಸರಿ. ನಾನು ಸದರಿ ಆಸ್ಪತ್ರೆಯಲ್ಲಿ ಯಾವುದೆ ಚಿಕಿತ್ಸೆ ಪಡೆದುಕೊಂಡಿಲ್ಲ. ನನ್ನನ್ನು ಅಮೃತಾ ಎಂತಲೂ ಸಹ ಕರೆಯುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಗೆ 1 ದಾಖಲಾತಿ ತೋರಿಸಲಾಗಿ ಅದರಲ್ಲಿರುವ ತಮ್ಮ ಅಣ್ಣ ಸಂತೋಷಕುಮಾರವರ ಸಹಿಯನ್ನು ಸಾಕ್ಷಿ ಈಗ ನೋಡಿ ಗುರುತಿಸಿದ್ದು, ದಾಖಲಾತಿಯನ್ನು ನಿ.ಆರ್ 1 ಹಾಗೂ ಸಹಿಯನ್ನು ನಿ.ಆರ್ 1 ಎ ಎಂದು ಗುರುತಿಸಲಾಯಿತು. ನಾನು ನನ್ನ ಮೊದಲನೆ ಮಗಳು ಇಂಚರಾರವರ ಹೆರಿಗೆ ಸಮಯದಲ್ಲಿ ಸದರಿ ಆಸ್ಪತ್ರೆಯಲ್ಲಿ ದಾಖಲಾಗಿದ್ದೇನು ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಿ.ಆರ್ 1ರ ಶಸ್ತ್ರ ಚಿಕಿತ್ಸೆಯ ಅನುಮತಿ ಪತ್ರಕ್ಕೆ ನನ್ನ ಮೊದಲನೆ ಗಂಡ ನಿಂಗರಾಜರವರ ಸಹಿಯನ್ನು ಮಾಡಿಸಲಾಗಿದೆ ಎಂದರೆ ಸರಿಯಲ್ಲ. ನಿ.ಆರ್ 1ರಲ್ಲಿ ನಿಂಗರಾಜ್ ಎ.ಜಿ ಎಂದು ಸಹಿ ಇದ್ದು ಅವರನ್ನು ನನ್ನ ಗಂಡ ಎಂದು ನಮೂದಿಸಲಾಗಿದೆ ಎಂದರೆ ಸರಿಯಲ್ಲ.

ಸಾಕ್ಷಿಗೆ ಶಾಲಾ ದಾಖಲಾತಿ ತೋರಿಸಲಾಗಿ ಅದರಲ್ಲಿ ಇಂಚರಾ ಎಂಬ ವಿದ್ಯಾರ್ಥಿಯ ಹೆಸರು ನಿಂಗರಾಜು ಮತ್ತು ಪೋಷಕರ ವಿಳಾಸವನ್ನು ಬೇಬಿ ಕೋಂ ನಿಂಗರಾಜು ಎಂದು ನಮೂದಿಸಲಾಗಿದೆ ಎಂದರೆ ಸಾಕ್ಷಿ ಸರಿ ಎಂದು ನುಡಿದಿದ್ದು, ದಾಖಲಾತಿಯನ್ನು ನಿ.ಆರ್ 2 ಎಂದು ಗುರುತಿಲಾಯಿತು. ಸಾಕ್ಷಿಗೆ ಶಾಲ ದಾಖಲಾತಿಯ ನಕಲು ಪ್ರತಿ ತೋರಿಸಲಾಗಿ ಅದರಲ್ಲಿ ಇಂಚರಾರವರ ತಂದೆಯ ಹೆಸರು ನಿಂಗರಾಜ್ ಎ.ಜಿ ಮತ್ತು ತಾಯಿಯ ಹೆಸರು ಬೇಬಿ ಎಂದು ನಮೂದಿಸಲಾಗಿದೆ ಎಂದರೆ ಸಾಕ್ಷಿ ಆ ರೀತಿ ನಮೂದು ಇರುವುದನ್ನು ಒಪ್ಪಿಕೊಂಡಿದ್ದರಿಂದ ದಾಖಲಾತಿಯನ್ನು ನಿ.ಆರ್ 3 ಎಂದು ಗುರುತಿಸಲಾಯಿತು. ಅದೆ ರೀತಿ ಸಾಕ್ಷಿ 2017-18 ನೇ ಸಾಲಿನ ವಿದ್ಯಾರ್ಥಿಯ ನೊಂದಣಿ ಅರ್ಜಿಯಲ್ಲಿಯೂ ಸಹ ವಿದ್ಯಾರ್ಥಿಯ ತಾಯಿಯ ಹೆಸರನ್ನು ಬೇಬಿ .ಬಿ ಮತ್ತು ತಂದೆಯ ಹೆಸರನ್ನು ನಿಂಗರಾಜ್ ಎ.ಜಿ ಎಂದು ನಮೂದಿಸಿರುವುದಾಗಿ ಒಪ್ಪಿಕೊಂಡಿದ್ದು ದಾಖಲಾತಿಯನ್ನು ನಿ.ಆರ್ 4 ಎಂದು ಗುರುತಿಸಲಾಯಿತು. ನಿ.ಆರ್ 4ರ

ದಾಖಲಾತಿಯಲ್ಲಿ ನನ್ನ ಮತ್ತು ನಿಂಗರಾಜರವರ ಆಧಾರ ಕಾರ್ಡ ಸಂಖ್ಯೆಗಳನ್ನು ಸಹ ನಮೂದಿಸಲಾಗಿದೆ ಎಂದರೆ ಸಾಕ್ಷಿ ನನಗೆ ಸಂಖ್ಯೆನೆನಪಿಲ್ಲ ಎಂದು ನುಡಿಯುತ್ತಾರೆ.

ಸಾಕ್ಷಿಗೆ ಅವರ ಅಕಾಲತ್ತ ನಲ್ಲಿರುವ ಸಹಿಯನ್ನು ತೋರಿಸಲಾಗಿ ಸಾಕ್ಷಿ ಅದು ಯಾರ ಸಹಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ಶಾಲಾ ವರ್ಗಾವಣೆಗಾಗಿ ನೀಡಿದ ಅರ್ಜಿಯ ದೃಢಿಕೃತ ನಕಲನ್ನು ತೋರಿಸಲಾಗಿ ಸಾಕ್ಷಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ದಾಖಲಾತಿಯನ್ನು ನಿ.ಆರ್ 5 ಹಾಗೂ ಸಾಕ್ಷಿಯ ಸಹಿಯನ್ನು ನಿ.ಆರ್ 5 ಎ ಎಂದು ಗುರುತಿಸಲಾಯಿತು. ನಿ.ಆರ್ 5 ರ ದಾಖಲಾತಿ ನಾನು ಎಂ.ಸಿ ಹಳ್ಳಿ ಶಾಲೆಯಿಂದ ಮೈಸೂರು ನಗರದ ಕುರಗಳ್ಳಿ ಶಾಲೆಗೆ ನನ್ನ ಮಗಳ ವರ್ಗಾವಣೆ ಕೋರಿ ಸಲ್ಲಿಸಿದ ಅರ್ಜಿ ಎಂದರೆ ಸರಿಯಲ್ಲ. ಆ ಪ್ರಕಾರ ನಿಮ್ಮ ಮಗಳು ಈಗ ಕುರಗಳ್ಳಿ ಶಾಲೆಯಲ್ಲಿ 2 ನೇ ತರಗತಿಯಲ್ಲಿ ಓದುತ್ತಿದ್ದಾಳೆ ಎಂದರೆ ಸಾಕ್ಷಿ ನನಗೆ ಮಗಳೆ ಇಲ್ಲ ಎಂದು ನುಡಿಯುತ್ತಾರೆ.

ನಾನು ಭಾಗ್ಯಲಕ್ಷ್ಮಿ ಬಾಂಡ್ ಪಡೆದುಕೊಂಡಿಲ್ಲ. ನಾನು ಭಾಗ್ಯಲಕ್ಷ್ಮಿ ಬಾಂಡ್ ಸಂಖ್ಯೆ 547626 ನ್ನು ಪಡೆದುಕೊಂಡಿಲ್ಲ. ಸದರಿ ಬಾಂಡನ್ನು ನಾನು ಶಿಶು ಅಭೀವೃದ್ಧಿ ಇಲಾಖೆಯಿಂದ ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ಇಂಚರಾರವರ ಶಾಲಾ ದಾಖಲಾತಿಗೆ ಸಂಬಂಧಿಸಿಂತೆ ನನ್ನನ್ನು ಕುರಗಳ್ಳಿ ಮೈಸೂರು ಶಾಲೆಗೆ ಕರೆದು ವಿಚಾರಣೆ ಮಾಡಿಲ್ಲ. ನಾನು ಇಂಚಾರವರ ಶಾಲಾ ದಾಖಲಾತಿಗಳನ್ನು ಯಾರಿಗೂ ನೀಡಬಾರದು ಎಂದು ಹೇಳಿದ್ದರಿಂದ ಅವರು ಎದುರುದಾರರಿಗೆ ಸದರಿ ದಾಖಲಾತಿ ನೀಡಲು ಆಗುವುದಿಲ್ಲ ಎಂದು ಹಿಂಬರಹ ನೀಡಿದ್ದಾರೆ ಎಂದರೆ ಸರಿಯಲ್ಲ. ನಾನು ಗಾಳಿಪುರ ಗ್ರಾಮದಲ್ಲಿ ವಾಸವಾಗಿರುವ ಬಗ್ಗೆ ಯಾವುದೆ ದಾಖಲಾತಿ ಹಾಜರು ಮಾಡಿಲ್ಲ ಎಂದರೆ ಸರಿ.

ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಸಮಯ ನೀಡಿ ಮುಂದೂಡಲಾಯಿತು.

ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇ.

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,
ಹೊಳೆನರಸೀಪುರ.